ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜ ನಿ : ಸುಮಪ : 2020–21 ದಿನಾಂಕ : 26–08–2020

# ಪತ್ರಿಕಾ ಆಮಂತ್ರಣ

1. ನೂತನ ಪಂಚಾಯತ್ ರಾಜ್ ಆಯುಕ್ತಾಲಯ ಕಚೇರಿ ಉದ್ಘಾಟನೆ ಮತ್ತು ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್

ಇಲಾಖೆಯ 2019–20 ನೇ ಸಾಲಿನ ಸಾಧನೆ ಪುಸ್ತಕ ಬಿಡುಗಡೆ:

ಕೆ.ಎಸ್. ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ದಿನಾಂಕ : 27–08–2020, ಗುರುವಾರ, ಸಮಯ : ಬೆಳಿಗ್ಗೆ 11–00 ಗಂಟೆಗೆ

ಸ್ಥಳ : ಆಯುಕ್ತರ ಕಾರ್ಯಾಲಯ, ಜಿಲ್ಲಾ ಪಂಚಾಯತ್ ಆವರಣ, ಕೆಂಪೇಗೌಡ ರಸ್ತೆ, ಗಾಂಧಿನಗರ, ಬೆಂಗಳೂರು

2. ಕರ್ನಾಟಕ ಶಾಸಕಾಂಗ ಪತ್ರಿಕೆ ಹಾಗೂ 15 ನೇ ವಿಧಾನ ಸಭೆಯ ವಿಧಾನ ಸಭಾ ಸದಸ್ಯರ ಪರಿಚಯ ಪುಸ್ತಕ ಬಿಡುಗಡೆ:

ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಗಳು ಹಾಗೂ ಮಾನ್ಯ ವಿಧಾನ ಸಭಾಧ್ಯಕ್ಷರುಗಳಿಂದ

ದಿನಾಂಕ : 27–08–2020, ಗುರುವಾರ, ಸಮಯ : ಬೆಳಿಗ್ಗೆ 11–00 ಗಂಟೆಗೆ

ಸ್ಥಳ : ಕೊಠಡಿ ಸಂಖ್ಯೆ 106, ಮೊದಲನೇ ಮಹಡಿ, ವಿಧಾನ ಸೌಧ, ಬೆಂಗಳೂರು

3. ಪತ್ರಿಕಾಗೋಷ್ಠಿ

ಸಿ.ಟಿ.ರವಿ, ಕನ್ನಡ–ಸಂಸ್ಕೃತಿ ಮತ್ತು ಯುವಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಚಿವರು.

ದಿನಾಂಕ : 27–8–2020 ಗುರುವಾರ, ಸಮಯ : ಬೆಳಿಗ್ಗೆ 12–00 ಗಂಟೆಗೆ

ಸ್ಥಳ : ಕೊಠಡಿ ಸಂಖ್ಯೆ : 334, ಸಮ್ಮೇಳನ ಸಭಾಂಗಣ, 3ನೇ ಮಹಡಿ, ವಿಧಾನಸೌಧ, ಬೆಂಗಳೂರು.

# ಪತ್ರಿಕಾ ಪ್ರಕಟಣೆ

## ಬಸವಣ್ಣನವರ ತತ್ವ-ಸಿದ್ಧಾಂತಗಳನ್ನು ಯುವಪೀಳಿಗೆಗೆ ಪರಿಚಯಿಸಬೇಕು

**-ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ**

ಬೆಂಗಳೂರು, ಆಗಸ್ಟ್ 26, ಕರ್ನಾಟಕ ವಾರ್ತೆ :

ವಿಶ್ವಗುರು ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಈಗಿನ ಯುವಪೀಳಿಗೆಗೆ ಪರಿಚಯಿಸುವ ನಿಟ್ಟಿನಲ್ಲಿ ನಗರ ಕೇಂದ್ರ ಭಾಗ ಬಸವೇಶ್ವರ ವೃತ್ತದಲ್ಲಿರುವ ಅಶ್ವಾರೂಢ ಬಸವಣ್ಣನವರ ಪ್ರತಿಮೆಯನ್ನು ನವೀಕರಿಸಿ ಅನಾವರಣಗೋಲಿಸಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಅವರು ಇಂದು ಬಸವೇಶ್ವರ ವೃತ್ತದಲ್ಲಿ ಬಿಬಿಎಂಪಿ ವತಿಯಿಂದ ರೂ.1.50 ಕೋಟಿಗಳ ವೆಚ್ಚದಲ್ಲಿ ನವೀಕರಿಸಲಾಗಿರುವ ಬಸವೇಶ್ವರ ಪ್ರತಿಮೆಯ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ನಾಡಿಗೆ 12ನೇ ಶತಮಾನದಲ್ಲಿ ಅನುಭವ ಮಂಟಪದ ಪರಿಕಲ್ಪನೆಯನ್ನು ನೀಡಿ, ಸಮಾಜಿಕ ಕ್ರಾಂತಿಯ ಹರಿಕಾರರಾದ ಬಸವಣ್ಣನವರು ಸದಾ ನಮ್ಮ ಮನಗಳಲ್ಲಿ ಮಾನ್ಯರು. ಇಂದು ನವೀಕರಿಸಿದ ಪ್ರತಿಮೆಯ ನಮ್ಮೆಲ್ಲರಿಗೂ ಬಸವಣ್ಣನವರ ಚಿಂತನೆಗಳನ್ನು ನೆನಪಿಸುವಲ್ಲಿ ಸಹಕಾರಿಯಾಗಲಿದೆ ಎಂದರು.

"ಕಾಯಕವೇ ಕೈಲಾಸ" ವೆಂದು ಸಾರಿದ ಮಹಾಚೇತನ ಬಸವಣ್ಣನವರು, ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಇದಿರ ಹಳಿಯಲು ಬೇಡ, ಅನ್ಯರಿಗೆ ಅಸಹ್ಯ ಪಡಬೇಡ,ತನ್ನ ಬಣ್ಣಿಸಬೇಡ ಎಂದ ಬಸವಣ್ಣನವರು, ಜನರಿಗೆ ಅತ್ಯುನ್ನತ ಜೀವನ ಮಾರ್ಗವನ್ನು ಕಲ್ಪಿಸಿಕೊಟ್ಟರು.

ಸರಳಜೀವನ, ಕಾಯಕದಲ್ಲಿ ಶ್ರದ್ಧೆ, ಸಮಾನತೆಯ ಬದುಕನ್ನು ಉಪದೇಶಿಸಿ,ಆಚರಿಸಿದ ಬಸವಣ್ಣ ಒಬ್ಬ ಆದರ್ಶ ವ್ಯಕ್ತಿಯಾಗಿ ಎಲ್ಲರ ಮನದಲ್ಲಿ ನೆಲೆಸಿದ್ದಾರೆ. ಅಸ್ಪೃಶ್ಯತೆ ಮೂಢನಂಬಿಕೆಗಳನ್ನು ನಿರ್ಮೂಲನೆ ಮಾಡಲು ತಮ್ಮ ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳ ಮೇಲೆ ವರ್ಣ-ವರ್ಗರಹಿತ ಸಮಾಜ ನಿಮಾಣದ ರೂವಾರಿಯಾದರು.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ವಗಳ ಮೂಲಕ ಅಪೂರ್ವ ಕೊಡುಗೆ ನೀಡಿದ್ದಾರೆ. ಬಸವಣ್ಣನವರು ಸಮಾಜದ ಅಂಕು-ಡೊಂಕುಗಳ ಬಗ್ಗೆ ಸಹಸ್ರಾರು ವಚನಗಳನ್ನು ಬರೆದು ಸಮಾಜದಮ ಓರೆಕೋರೆಗಳನ್ನು ತಿದ್ದಿದ ಬಸವಾದಿ ಶರಣರ ಕನಸಿನ ಸಮ-ಸಮಾಜವನ್ನು ನಿರ್ಮಿಸುವ ಕಾರ್ಯದಲ್ಲಿ ನಾವೆಲ್ಲಾ ಮುಂದಾಗೋಣ ಎಂದರು.

ಪ್ರತಿಮೆಯ ಆವರಣದಲ್ಲಿ ಬಸವಣ್ಣವರ ವಚನಗಳನ್ನು ಸೂಚಿಸು ಕಲಾಕೃತಿಗಳು, ಕಿರು ಉದ್ಯಾನವನ, ಬೆಳಕು ಹಾಗೂ ಸಂಗೀತದ ವ್ಯವಸ್ಥೆಯಿಂದ ನೋಡುಗರ ಆಕರ್ಷಣೆಯ ಕೇಂದ್ರವಾಗಲಿದೆ ಎಂದರು.

# ಕಾನೂನು ಪದವಿ ಪರೀಕ್ಷೆ ಮುಂದೂಡಿಕೆ : ಸಚಿವ ಮಾಧುಸ್ವಾಮಿ

ಬೆಂಗಳೂರು, ಆಗಸ್ಟ್ 26,(ಕರ್ನಾಟಕ ವಾರ್ತೆ):

ರಾಜ್ಯದ ಕಾನೂನು ವಿಶ್ವವಿದ್ಯಾಲಯದ ಅಧೀನದಲ್ಲಿರುವ ಕಾನೂನು ಪದವಿ ಕಾಲೇಜುಗಳ ಪರೀಕ್ಷೆಯನ್ನು ಸದ್ಯಕ್ಕೆ ಮುಂದೂಡಲಾಗಿದ್ದು ಪ್ರಥಮ ವರ್ಷದಿಂದ ನಾಲ್ಕನೇ ವರ್ಷದ ಪರೀಕ್ಷೆಗಳನ್ನು ಅಕ್ಟೋಬರ್‌ನಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಹೇಳಿದರು.

ಇಂದು ವಿಧಾನಸೌಧದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಕೋವಿಡ್ ಹಿನ್ನಲೆಯಲ್ಲಿ ಮುಂದೂಡುಲಾಗಿರುವ ಪರೀಕ್ಷೆಗಳನ್ನು ನಡೆಸುವ ಕುರಿತು ಹಮ್ಮಿಕೊಳ್ಳಲಾಗಿದ್ದ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಚಿವರು ಮುಂದಿನ ತಿಂಗಳು 21 ರಿಂದ ನಡೆಸಲು ಉದ್ದೇಶಿಸಲಾಗಿದ್ದ ಪರೀಕ್ಷಕೆಗಳನ್ನು ಮುಂದೂಡಲಾಗಿದ್ದು, ತರಗತಿಗಳ ಆರಂಭವಾದ ನಂತರ ಈ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕೋವಿಡ್-19 ಹಿನ್ನಲೆಯಲ್ಲಿ ಪರೀಕ್ಷೆಗಳನ್ನು ನಡೆಸಲು ಇನ್ನೂ ಸಾಧ್ಯವಾಗಿಲ್ಲ, ಪ್ರಸ್ತುತ ಆನ್‌ಲೈನ್‌ನಲ್ಲಿ ನಡೆಯುತ್ತಿರುವ ತರಗತಿಗಳು ನೇರವಾಗಿ ಆರಂಭವಾದ ನಂತರ ವಿದ್ಯಾರ್ಥಿಗಳಿಗೆ ಇಲ್ಲಿಯವರೆಗೆ ಆಗಿರುವ ಪಠ್ಯವನ್ನು ಮನನ ಮಾಡಿದ ನಂತರ ಪರೀಕ್ಷೆಗಳ ದಿನಾಂಕಗಳ ಕುರಿತು ಮತ್ತೊಂದು ಸಭೆ ನಡೆಸಲಾಗುವುದು.

ಕಾನೂನು ಪದವಿ ಕಾಲೇಜುಗಳ ಪರೀಕ್ಷೆಗಳನ್ನು ಮುಂದೂಡುವಂತೆ ಅನೇಕರು ಈಗಾಗಲೇ ಒತ್ತಾಯಿಸಿದ್ದರು, ಅಕ್ಟೋಬರ್ ಅಥವಾ ಅಂದಿನ ಪರಿಸ್ಥಿತಿಯನ್ನು ನೋಡಿಕೊಂಡು ಪರೀಕ್ಷಾ ದಿನಾಂಕಗಳನ್ನು ನಿಗಧಿಪಡಿಸಲಾಗುವುದು ಎಂದು ಹೇಳಿದರು.

ಅಂತಿಮ ವರ್ಷದ ಪರೀಕ್ಷೆಯನ್ನು ಆನ್‌ಲೈನ್ ಮೂಲಕ ನಡೆಸಲು Bar Council India ಅವರು ಸ್ಪಷ್ಟವಾದ ಸೂಚನೆ ನೀಡಿದ್ದಾರೆ. ಉಳಿದ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಅವರ ಹಿಂದಿನ ಪರೀಕ್ಷೆಗಳನ್ನು ಪರಿಗಣಿಸಲು ಯೋಜಿಸಲಾಗಿದೆ ಎಂದರು.

ಕರ್ನಾಟಕ  ರಾಜ್ಯ ಕಾನೂನು ವಿಶ್ವವಿದ್ಯಾಲಯದ ಉಪಕುಲಪತಿ ಈಶ್ವರ್ ಭಟ್, ಕುಲಸಚಿವ ಮೇಜರ್ ಸದ್ದಲಿಂಗ ಹಿರೇಮಠ್, ರಿಜಿಸ್ಟ್ರಾರ್ ಮೌಲ್ಯಮಾಪನ ವಿಭಾಗದ ಜಿ.ವಿ.ಪಾಟೀಲ್ ಹಾಗೂ ಕಾನೂನು ಕಾಲೇಜುಗಳ ಪ್ರಾಂಶುಪಾಲರು ಉಪಸ್ಥಿತರಿದ್ದರು.

## ಗೆಜೆಟೆಡ್ ಪ್ರೊಬೇಷನರ್ ಪರೀಕ್ಷೆಯ ಕೀ ಉತ್ತರ ಪ್ರಕಟ

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ 24–08–2020ರಂದು ನಡೆಸಿದ 2017–18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ ಎ ಮತ್ತು ಬಿ ವೃಂದದ ಒಟ್ಟು 106 ಹುದ್ದೆಗಳ ಪೂರ್ವಭಾವಿ ಪರೀಕ್ಷೆಯ ಕೀ ಉತ್ತರಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ವೆಬ್‌ಸೈಟ್ http://kpsc.kar.nic.in ನಲ್ಲಿ ಪ್ರಕಟಿಸಿದೆ.

ಕೀ ಉತ್ತರಗಳಿಗೆ ಆಕ್ಷೇಪಣೆಗಳನ್ನು ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕ ಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು–560001 ಇವರಿಗೆ ದಿನಾಂಕ 01–09–2020ರಂದು ಸಂಜೆ 5–30 ರೊಳಗಾಗಿ ತಲುಪುವಂತೆ ಈ ವಿಳಾಸಕ್ಕೆ ಮಾತ್ರ ಕಳುಹಿಸಿಕೊಡಬೇಕು.

ಆಕ್ಷೇಪಣೆಗಳ ವಿವರಗಳನ್ನು ಕಡ್ಡಾಯವಾಗಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಆಕ್ಷೇಪಣೆಗಳು ಅಂಚೆಯ ಮೂಲಕ ಆಯೋಗಕ್ಕೆ ತಲುಪಲು ವಿಳಂಬವಾದಲ್ಲಿ ಆಯೋಗವು ಜವಾಬ್ದಾರಿಯಾಗಿರುವುದಿಲ್ಲ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಐ.ಬಿ.ಪಿ.ಎಸ್ ರಾಷ್ಟ್ರೀಕೃತ ಬ್ಯಾಂಕ್ ಗಳ ನೇಮಕಾತಿ ಪರೀಕ್ಷೆಗೆ ಆನ್‌ಲೈನ್ ತರಬೇತಿ

ಬೆಂಗಳೂರು, ಆಗಸ್ಟ್ 26 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ “ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ”ದ ವತಿಯಿಂದ ಐ.ಬಿ.ಪಿ.ಎಸ್ ರಾಷ್ಟ್ರೀಕೃತ ಬ್ಯಾಂಕ್ ನವರು ಮುಂದಿನ ದಿನಗಳಲ್ಲಿ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಆನ್‌ಲೈನ್‌ನಲ್ಲಿ ನೀಡಲು ಆಯೋಜಿಸಿದೆ.

ಆಸಕ್ತರು ದಿನಾಂಕ: 31.08.2020 ರೊಳಗಾಗಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು 0821–2515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದೆಂದು  ಕರಾಮುವಿ ಕುಲಸಚಿವರಾದ ಪ್ರೊ. ಲಿಂಗರಾಜಗಾಂಧಿ ರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಛಾಯಾಚಿತ್ರ ಶೀರ್ಷಿಕೆ :

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವಂತಹ ಕಾನೂನು ಕಾಲೇಜುಗಳಲ್ಲಿ ಪರೀಕ್ಷೆ ನಡೆಸುವ ಸಂಬಂಧ ಚರ್ಚೆ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಅಧ್ಯಕ್ಷತೆ ವಹಿಸಿದ್ದರು.

## ಬಿ.ಬಿ.ಎಂ.ಪಿ. ಸಾರ್ವತ್ರಿಕ ಚುನಾವಣೆ

### ನಿಗದಿತ ಅವಧಿಯೊಳಗೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ಸೂಚನೆ

ಬೆಂಗಳೂರು, ಆಗಸ್ಟ್ 26, ಕರ್ನಾಟಕ ವಾರ್ತೆ :

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಾರ್ವತ್ರಿಕ ಚುನಾವಣೆ ನಡೆಸುವ ಸಂಬಂಧ ಮತದಾರರ ಪಟ್ಟಿ ತಯಾರಿಕೆ ಹಾಗೂ ಇತರೆ ಪೂರ್ವ ಸಿದ್ಧತೆಗಳ ಬಗ್ಗೆ ಚರ್ಚಿಸುವ ಸಲುವಾಗಿ ಆಯುಕ್ತರು, ರಾಜ್ಯ ಚುನಾವಣಾ ಆಯೋಗ ಅವರ ಅಧ್ಯಕ್ಷತೆಯಲ್ಲಿ ಇಂದು ಆಯೋಗದಲ್ಲಿ ಸಭೆ ನಡೆಸಲಾಯಿತು.

ಸದರಿ ಸಭೆಯಲ್ಲಿ ಬಿ.ಬಿ.ಎಂ.ಪಿ.ಯ ಆಯುಕ್ತರು, ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿಗಳು ಹಾಗೂ ಮತದಾರರ ಪಟ್ಟಿ ಸಿದ್ದತೆಗಾಗಿ ಆಯೋಗದಿಂದ ನೇಮಕಗೊಂಡಂತಹ ಜಿಲ್ಲಾ ಚುನಾವಣಾಧಿಕಾರಿಗಳಾದ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ವಿಶೇಷ ಆಯುಕ್ತರು(ಆಡಳಿತ), ಬಿ.ಬಿ.ಎಂಪಿ. ಜಂಟಿ ಆಯುಕ್ತರು(ದಕ್ಷಿಣ), ಜಂಟಿ ಆಯುಕ್ತರು (ಮಹದೇವಪುರ), ಜಂಟಿ ಆಯುಕ್ತರು ರಾಜರಾಜೇಶ್ವರಿನಗರ, ಜಂಟಿ ಆಯುಕ್ತರು, ಬೊಮ್ಮನಹಳ್ಳಿ ಸಹಾಯಕ ಆಯುಕ್ತರು(ಚುನಾವಣೆ) ಬಿ.ಬಿ.ಎಂ.ಪಿ. ಇವರುಗಳು ಹಾಜರಾಗಿದ್ದರು.

ಚಾಲ್ತಿಯಲ್ಲಿರುವ ಕರ್ನಾಟಕ ವಿಧಾನ ಸಭಾ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ಸರ್ಕಾರವು 23-6-2020 ರಂದು ಹೊರಡಿಸಿರುವ ಬಿ.ಬಿ.ಎಂ.ಪಿ.ಯ ವಾರ್ಡುಗಳ ಪುನರ್ ವಿಂಗಡಣೆಯ ಅಂತಿಮ ಅಧಿಸೂಚನೆ ಅನುಸಾರವಾಗಿ ವಾರ್ಡುವಾರು ಮತದಾರರ ಪಟಿಯನ್ನು ಸಿದ್ಧಪಡಿಸುವ ಬಗ್ಗೆ ಆಯೋಗದಿಂದ ಆಗಸ್ಟ್ 12 ರಂತೆ ಸೂಚನೆಗಳನ್ನು ನೀಡಲಾಗಿದೆ.

ವಾರ್ಡುಗಳ ಪುನರ್ ವಿಂಗಡಣೆಯ ಅನುಗುಣವಾಗಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಬಗ್ಗೆ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು. ಆಯೋಗದ ಸೂಚನೆಯಂತೆ ವಾರ್ಡುವಾರು ಮತದಾರರ ಪಟ್ಟಿ ಸಿದ್ಧತೆಗಾಗಿ ಮತದಾರರ ನೋಂದಣಾಧಿಕಾರಿ ಮತ್ತು ಸಹಾಯಕ ಮತದಾರರ ನೋಂದಣಾಧಿಕಾರಿಗಳನ್ನು ಒಳಗೊಂಡಂತೆ ಇತರೆ ಅಧಿಕಾರಿ / ಸಿಬ್ಬಂದಿಗಳಿಗೆ ಆಗಸ್ಟ್ 21 ರಂದು ತರಬೇತಿಯನ್ನು ನೀಡಲಾಗಿದೆ ಎಂದು ಬಿ.ಬಿ.ಎಂ.ಪಿ. ಆಯುಕ್ತರು ತಿಳಿಸಿದರು. ವಾರ್ಡು ಪುನರ್ ವಿಂಗಡಣೆಯಂತೆ ಪ್ರತಿಯೊಂದು ವಾರ್ಡಿನ ಗಡಿ ಸರಹದ್ದಿನಲ್ಲಿರುವ ಮತದಾರರನ್ನು ಗುರುತಿಸಿ ಯಾವುದೇ ಮತದಾರರ ಹೆಸರುಗಳು ಒಂದಕ್ಕಿಂತ ಹೆಚ್ಚು ವಾರ್ಡಿನ ಮತದಾರರ ಪಟ್ಟಿಯಲ್ಲಿ ಪುನರಾವರ್ತನೆಯಾಗದಂತೆ ಹಾಗೂ ಆಯಾ ವಾರ್ಡಿನ ಮತದಾರರು ಆಯಾ ವಾರ್ಡಿನಲ್ಲೇ ಇರುವಂತೆ ಯಾವುದೇ ಲೋಪದೋಷಗಳಿಗೆ ಅವಕಾಶ ನೀಡದಂತೆ ಹಾಗೂ ಆಯೋಗವು

ನಿಗದಿಪಡಿಸಿದ ವೇಳಾಪಟ್ಟಿಯಂತೆ ನಿಗದಿತ ಅವಧಿಯೊಳಗೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಂತೆ ಆಯೋಗದ ಆಯುಕ್ತರು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸೂಚಿಸಿದರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಆಗಸ್ಟ್ 27 ರಂದು ನೀರಿನ ಅದಾಲತ್

**ಬೆಂಗಳೂರು, ಆಗಸ್ಟ್ 26, ಕರ್ನಾಟಕ ವಾರ್ತೆ :**

ಬೆಂಗಳೂರು ಜಲಮಂಡಳಿಯ **ದಕ್ಷಿಣ ವಿಲೇಜ್-2, ಆಗ್ನೇಯ -5, ಪಶ್ಚಿಮ ವಿಲೇಜ್-1, ನೈರುತ್ಯ-4, ಪೂರ್ವ ವಿಲೇಜ್-3, ಪೂರ್ವ ವಿಲೇಜ್-1, ವಾಯುವ್ಯ-5, ಈಶಾನ್ಯ -3 ಮತ್ತು ಉತ್ತರ**-1 ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು-ಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ನ್ನು ಆಗಸ್ಟ್ 27 ರಂದು ಬೆಳಗ್ಗೆ 9.30 ರಿಂದ 11.00 ಗಂಟೆಯವರೆಗೆ ಏರ್ಪಡಿಸಲಾಗಿದೆ.

**ದಕ್ಷಿಣ ವಿಲೇಜ್-2ರ** ಸೆಂಟ್ರಲ್ ಜೈಲು ರಸ್ತೆ, ಕೂಡ್ಲು ಜಿ ಎಲ್ ಆರ್, ಕೂಡ್ಲು ಮೊ.ಸಂ: 9845444090 . **ಆಗ್ನೇಯ -5ರ** ಕಪಿಲ ಭವನ, 1ನೇ ಮಹಡಿ, 4ನೇ ಟಿ ಬ್ಲಾಕ್, ಜಯನಗರ. ಮೊ.ಸಂ: 9845444063. **ಪಶ್ಚಿಮ ವಿಲೇಜ್-1ರ** 4ನೇ ಬ್ಲಾಕ್, ಬಿ.ಎಸ್.ಕೆ 6ನೇ ಹಂತ, ಪವನಪುರ, ರಾಘವೇಂದ್ರ ಸ್ವಾಮಿ ದೇವಸ್ಥಾನದ ಮುಂಭಾಗ, ಅಂಗಧೀರನಹಳ್ಳಿ. ಮೊ.ಸಂ: 9845444063. **ನೈರುತ್ಯ-4ರ** ಮೊದಲನೇ ಮಹಡಿ, ಬನಗಿರಿನಗರ, ವಾಟರ್ ಟ್ಯಾಂಕ್ ಪಕ್ಕ, ಬನಶಂಕರಿ 3ನೇ ಹಂತ, 1ನೇ ಮುಖ್ಯರಸ್ತೆ. ದೂ.ಸಂ: 22945198. , **ಪೂರ್ವ ವಿಲೇಜ್-3ರ** ಸೆಂಟ್ರಲ್ ಜೈಲು ರಸ್ತೆ, ಕೂಡ್ಲು ಜಿ ಎಲ್ ಆರ್, ಕೂಡ್ಲು, ಹೊಸ ರಸ್ತೆ, ಅರಳೂರು. ಮೊ.ಸಂ: 9591987951. **ಪೂರ್ವ ವಿಲೇಜ್-1ರ** ಬಂಜಾರ ಲೇಔಟ್, ಎಸ್.ಟಿ.ಪಿ ಆವರಣ, ಹೊರಮಾವು ಮೊ.ಸಂ: 9945233444. **ವಾಯುವ್ಯ-5ರ** ಶ್ರೀರಾಮ ಡಿಲಕ್ಸ್ ಹೋಟೆಲ್ ಹಿಂಭಾಗ, ಪೀಣ್ಯ 2ನೇ ಹಂತ, ಬಿಎಂಟಿಸಿ ಬಸ್ ನಿಲ್ದಾಣ ದೂ.ಸಂ. 28372030. **ಈಶಾನ್ಯ-3** ನಂ.3, ಪಿ&ಟಿ ಕಾಲೋನಿ, ಆರ್.ಟಿ.ನಗರ ದೂ.ಸಂ: 22945139. **ಉತ್ತರ-1,** 8ನೇ ಮುಖ್ಯ ರಸ್ತೆ, 'ಡಿ' ಬ್ಲಾಕ್, ಸಹಕಾರನಗರ. ಮೊ.ಸಂ: 9845444123 **ಈ ಸ್ಥಳಗಳಲ್ಲಿ ನೀರಿನ ಅದಾಲತ್ ನಡೆಯಲಿದೆ.**

**ಮೇಲೆ ತಿಳಿಸಲಾದ ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಸೇವಾಠಾಣೆಗಳ ವಿವರ : ಈ ಕೆಳಕಂಡಂತಿದೆ.** (ದಕ್ಷಿಣ ವಿಲೇಜ್)-2 ಕೂಡ್ಲು, ಬೇಗೂರು. ಆಗ್ನೇಯ -5-ಜೆ.ಪಿ.ನಗರ-1 &3, ಜಯನಗರ 4ನೇ ಟಿ ಬ್ಲಾಕ್, ಜಯನಗರ 4ನೇ ಬ್ಲಾಕ್, ಹೊಂಬೇಗೌಡನಗರ, ಭೈರಸಂದ್ರ. ಪಶ್ಚಿಮ ವಿಲೇಜ್-1 ಅಂಗಧೀರನಹಳ್ಳಿ, ಹೆಮ್ಮಿಗೆಪುರ,ಬನಶಂಕರಿ 6ನೇ ಹಂತ. ನೈರುತ್ಯ-4 ಬಿ.ಎಸ್.ಕೆ 1 &2, ಕುಮಾರಸ್ವಾಮಿ ಲೇಔಟ್, ಇಸ್ರೋ ಲೇಔಟ್, ಪೂರ್ಣ ಪ್ರಜ್ಞಾ ಲೇಔಟ್, ಬನಗಿರಿನಗರ. ಪೂರ್ವ ವಿಲೇಜ್-3- ಅರಳೂರು, ದೊಡ್ಡ ಕಣ್ಣನಹಳ್ಳಿ, ಕಸವನಹಳ್ಳಿ. ಪೂರ್ವ ವಿಲೇಜ್-1 ಐ.ಎಸ್.ಪಿ.ಎಸ್, ಹೊರಮಾವು, ರಾಜಾಕೆನಲ್. ವಾಯುವ್ಯ-5 ಪೀಣ್ಯ ದಾಸರಹಳ್ಳಿ, ಪೀಣ್ಯ, ಅಂಗಧೀರನಹಳ್ಳಿ, ಅಂದರಹಳ್ಳಿ. ಈಶಾನ್ಯ -3 ಆರ್.ಟಿ.ನಗರ, ಕಾವಲ್ ಭೈರಸಂದ್ರ, ಸಂಜಯನಗರ, ಬಿ.ಇ.ಎಲ್ ರಸ್ತೆ, ಗಂಗಾನಗರ, ಆನಂದನಗರ, ಮನೋರಮ ಪಾಳ್ಯ.ಉತ್ತರ-1 ಸಹಕಾರನಗರ, ಜಕ್ಕೂರು, ಕೆಂಪಾಪುರ (ಕಾಫಿ ಬೋರ್ಡ್ ಲೇಔಟ್)

ಕುಂದು ಕೊರತೆಗಳಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ: 8762228888 ಗೆ ಸಂಪರ್ಕಿಸಬಹುದಾಗಿದೆ.

ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯ ಬಳಸಿಕೊಳ್ಳಬಹುದಾಗಿದೆ. ಹಾಗೂ **ಕೋವಿಡ್–19** ರ ಮಾರ್ಗದರ್ಶನದಂತೆ ಸಭೆಗೆ ಹಾಜಾರಾಗಲಿರುವ ಸಂದರ್ಭದಲ್ಲಿ ಎಲ್ಲಾ ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು.

**BWSSB:Water Adalath in AEE(South Village-2), AEE( South East-5), AEE (West Village-1), AEE(South West-4), AEE( East Village-3), AEE( East Village-1) & AEE( North West-5), (North East-3) and (North -1) sub division on August 27th.**

BWSSB water Adalath is being held on 27.08.2020 in AEE (South Village-2), (South East-5), (West Village-1), (South West -4), (East Village-3), (East Village-1), (North West-5), (North East-3), and (North -1) sub divisions from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues. The details of the places where the Adalath will be held is as follows.

| Sub-division | Address | Phone Number |
|---|---|---|
| **(South Village-2)** | Central Jail Road, Koodlu GLR , Koodlu | 9845444090 |
| **(South East-5)** | Kapila Bhavan, 1st floor, 4th 'T' Block, Jayanagar | 22945148 |
| **(West Village-1)** | 4th Block, BSK 6th Stage, Pavanapura, Opp Raghavendra Swamy Temple, Lingadheeranahalli | 9845444063 |
| **(South West -4)** | 1st floor, Banagiri Nagar, Near Water Tank, Banashankari 3rd Stage, 1st main road. | 22945198 |

| | | |
|---|---|---|
| **(East Village-3)** | Central Jail Road, Koodlu GLR , Koodlu, New Road, Aralur | 9591987951 |
| **(East Village-1)** | Banjara Layout, STP Premises, Horamavu | 9945233444 |
| **(North West-5)** | Behind Sriram Deluxe Hotel, Peenya 2nd Stage, Peenya 2nd Stage, BMTC Bus Stop. | 28372030 |
| **(North East-3)** | No.3, P&T Colony, RT Nagar | 22945139 |
| **(North-1)** | 8th Main Road, 'D' Block, Sahakar Nagar | 9845444123 |

**The details of service stations coming under the subdivisions mentioned above are as follows:**

| Sub-division | Service Stations |
|---|---|
| **(South Village-2)** | Koodlu, Begur |
| **(South East-5)** | JP Nagar 1 &3, Jayanagar 4th 'T' Block, Jayanagar 4th Block, Hombegowda nagar, Byrasandra |
| **(West Village-1)** | Lingadheeranahalli, Hemmigepura,BSK 6th Stage |
| **(South West -4)** | BSK 1&2, Kumaraswamy Layout, ISRO layout, Poorna Pragna layout, Banagirinagar |
| **(East Village-3)** | Araluru, Doddakannanahalli,Kasavanahalli |
| **(East Village-1)** | ISPS, Horamavu , Rajacanal |
| **(North West-5)** | Peenya Dasarahalli, Peenya, Lingadheeranahalli, Andarahalli |
| **(North East-3)** | RT Nagar, Kaval Byarasandra, Sanjayanagar, BEL Road,Ganganagar, Anand Nagar, |

| | |
|---|---|
| | Manoramapalya |
| **(North -1)** | Sahakar Nagar, Jakkur, Kempapura (Coffee Board Lay out) |

For any problems regarding the water supply, public can contact 24x7 call centre: 22238888 helpline number: 1916 & whats app no: 8762228888. Public can utilize this adalath facilities to solve the problems regarding water supply. And public are requested to follow all precautionary measures according to **COVID-19** guidelines while attending the adalath.

# “ಕನ್ನಡಿಗರಿಗೇ ಉದ್ಯೋಗ ನೀಡಿ: ಟಿ.ಎಸ್.ನಾಗಾಭರಣ”

## ನಮ್ಮ ಮೆಟ್ರೋದಲ್ಲಿ ನಡೆದ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷರ ತಾಕೀತು

**ಬೆಂಗಳೂರು, ಆಗಸ್ಟ್ 26, ಕರ್ನಾಟಕ ವಾರ್ತೆ :**

ಕನ್ನಡ ನಾಡು–ನುಡಿ, ಸಂಸ್ಕೃತಿ ಹಾಗೂ ಕನ್ನಡದ ಸಾಹಿತಿಗಳ ಸಂದೇಶಗಳನ್ನು ಪ್ರಚುರಪಡಿಸುವ ಮೂಲಕ ಬೆಂಗಳೂರು ಮೆಟ್ರೋ, ಕನ್ನಡ ಭಾಷೆಯ ಒಂದು ವಾಹಕವಾಗಿ ಕೆಲಸ ಮಾಡಬೇಕೇ ವಿನಃ ಹಿಂದಿಯನ್ನು ಹೇರುವ ವಕ್ತಾರರಾಗಬಾರದು ಎಂದು **ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್.ನಾಗಾಭರಣ** ಅವರು ಹೇಳಿದರು.

ಬೆಂಗಳೂರು ನಮ್ಮ ಮೆಟ್ರೋದಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಜಾಲ ಸಂಪರ್ಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತುರ್ತು ಸಂದರ್ಭದಲ್ಲಿ ಬಳಸಲಾಗುವ ಬಾಗಿಲುಗಳ ಮೇಲೆ ಸಂಪೂರ್ಣವಾಗಿ ಹಿಂದಿಯನ್ನು ಬಳಸಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಅಧ್ಯಕ್ಷರು, ಕನ್ನಡದ ಇತಿಹಾಸ, ಪರಂಪರೆ, ಸಂಗೀತ, ಸಾಹಿತ್ಯವನ್ನು ಉತ್ತುಂಗಕ್ಕೇರಿಸುವ ನಿಟ್ಟಿನಲ್ಲಿ ನಮ್ಮ ಮೆಟ್ರೋದ ಜವಾಬ್ದಾರಿಯೂ ಇದೆ. ಮೆಟ್ರೋದಲ್ಲಿ ಓಡಾಡುವವರು ಕನ್ನಡಿಗರೇ ಆಗಿದ್ದಾರೆ ಮತ್ತು ರಾಜ್ಯದೊಳಗೆ ಇರುವ ಯಾವುದೇ ಸಂಸ್ಥೆಯು ರಾಜ್ಯ ಸರ್ಕಾರದ ಭಾಷಾನೀತಿಯನ್ವಯ ಕಾರ್ಯನಿರ್ವಹಿಸುವುದು, ಈ ನೆಲದ ಕಾನೂನನ್ನು ಗೌರವಿಸುವುದು ಸಂಸ್ಥೆಯ ಕರ್ತವ್ಯ ಕೂಡ ಆಗಿದೆ ಎಂದು ಹೇಳಿದರು.

ಮೆಟ್ರೋ ಕಾಮಗಾರಿ ಸಂದರ್ಭದಲ್ಲಿ ಜಯದೇವ ಆಸ್ಪತ್ರೆ ಸಮೀಪದಲ್ಲಿ ಕನ್ನಡವನ್ನು ತಪ್ಪಾಗಿ ಬರೆಯಲಾಗಿದ್ದ ನಾಮಫಲಕವನ್ನು ಆನ್‌ಲೈನ್‌ನಲ್ಲಿ ಪ್ರದರ್ಶಿಸಿ, ಇವೆಲ್ಲ ಗೂಗಲ್ ಅನುವಾದದ ಅಚಾತುರ್ಯಗಳು. ಹೀಗೆ ಮಾಡುವುದರಿಂದ ಕನ್ನಡದ ನೆಲದಲ್ಲಿಯೇ ಕನ್ನಡವನ್ನು ಅವಮಾನಿಸಿದಂತಾಗುತ್ತದೆ. ಹಾಗಾಗಿ ಈ ನೆಲದಲ್ಲಿ ಸಾಕಷ್ಟು ಮಂದಿ ತಜ್ಞರು, ಅನುವಾದಕರು ಇದ್ದಾರೆ. ಅವರ ಸಲಹೆ ಪಡೆದು ನಾಮಫಲಕವನ್ನು ಅಳವಡಿಸುವಂತೆ ತಾಕೀತು ಮಾಡಿದರು.

**ಕನ್ನಡೀಗರಿಗೇ ಉದ್ಯೋಗ ನೀಡಿ:**

ಮೆಟ್ರೋ ಸಂಸ್ಥೆಯಲ್ಲಿ ಬಹುಮುಖ್ಯವಾಗಿ ಸ್ವಚ್ಛತಾ ಸಿಬ್ಬಂದಿ ಮತ್ತು ಭದ್ರತಾ ಸಿಬ್ಬಂದಿಗಳು ಅನ್ಯರಾಜ್ಯದವರಿರುವ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಾಕಷ್ಟು ದೂರುಗಳು ಬಂದಿವೆ. ಉತ್ತರ ಕರ್ನಾಟಕದವರು ಸೇರಿದಂತೆ ನಮ್ಮ ರಾಜ್ಯದ ಸಾಕಷ್ಟು ಮಂದಿ ಕೆಲಸವಿಲ್ಲದೆ ತೊಂದರೆಗೆ ಸಿಲುಕಿರುವಾಗ ನೀವು ಅನ್ಯರಾಜ್ಯದವರಿಗೆ ಕೆಲಸ ನೀಡುವುದು ಸರಿಯಲ್ಲ. ಹೊರಗುತ್ತಿಗೆ ನೌಕರರನ್ನು ಒದಗಿಸುವವರಿಗೆ ಕನ್ನಡಿಗರನ್ನೇ ಕರೆತರುವಂತೆ ಷರತ್ತು ವಿಧಿಸಬೇಕಿದೆ. ಯಾವುದೇ ಕಾರಣಕ್ಕೂ ಇನ್ನು ಮುಂದೆ ಹೀಗಾಗದಂತೆ ಎಚ್ಚರವಹಿಸಬೇಕು ಮತ್ತು ಕನ್ನಡದ ನೆಲದಲ್ಲಿ ಹಿಂದಿ ಹೇರಿಕೆಯನ್ನು ಕನ್ನಡಿಗರು ಎಂದಿಗೂ ಸಹಿಸುವುದಿಲ್ಲ ಎಂಬುದನ್ನು ತಾವು ಮನಗಾಣಬೇಕಿದೆ ಎಂದು ಬೆಂಗಳೂರು ಮೆಟ್ರೋದ ವ್ಯವಸ್ಥಾಪಕ ನಿರ್ದೇಶಕರಾದ ಅಜಯ್ ಸೇಠ್ ಅವರಿಗೆ ಎಚ್ಚರಿಕೆ ನೀಡಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ **ಬೆಂಗಳೂರು ಮೆಟ್ರೋದ ವ್ಯವಸ್ಥಾಪಕ ನಿರ್ದೇಶಕರಾದ ಅಜಯ್ ಸೇಠ್ ಅವರು**, ಇನ್ನು ಮುಂದೆ ಯಾವುದೇ ಕಾರಣಕ್ಕೂ ಗೂಗಲ್ ಅನುವಾದವನ್ನು ಬಳಸುವುದಿಲ್ಲ. ನಮ್ಮ ಮೆಟ್ರೋದಲ್ಲಿ ಕರ್ನಾಟದವರಿಗೆ ಉದ್ಯೋಗ ನೀಡುವ ನಿಟ್ಟಿನಲ್ಲಿ ಗಮನಹರಿಸಲಾಗುವುದು ಮತ್ತು ಕನ್ನಡ ಭಾಷೆ, ಪರಂಪರೆಯನ್ನು ಹಂಚುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತೇವೆ ಮತ್ತು ಸಭೆಯಲ್ಲಿ ಚರ್ಚಿತವಾಗಿರುವ ಎಲ್ಲ ಲೋಪದೋಷಗಳನ್ನು ನವೆಂಬರ್ ಒಳಗೆ ಸರಿಪಡಿಸಿಕೊಂಡು ತಮಗೆ ವರದಿ ನೀಡವುದಾಗಿ ಭರವಸೆ ನೀಡಿದರು.

**ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ.ಮುರಳಿಧರ** ಅವರು ಪ್ರಾಧಿಕಾರದ ಜವಾಬ್ದಾರಿಗಳ ಬಗ್ಗೆ ಮಾಹಿತಿ ಹಂಚಿಕೊಂಡರು.

**ಮಾನ್ಯ ಮುಖ್ಯಮಂತ್ರಿಗಳ ಇ–ಆಡಳಿತ ಸಲಹೆಗಾರರಾದ ಬೇಳೂರು ಸುದರ್ಶನ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಕೆ.ಮುರಳಿಧರ, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಡಾ.ವೀರಶೆಟ್ಟಿ, ವೆಬ್ ಪೋರ್ಟಲ್ ಯೋಜನಾಧಿಕಾರಿ ಸತೀಶ್, ನಮ್ಮ ಮೆಟ್ರೋ ವ್ಯವಸ್ಥಾಪಕ ನಿರ್ದೇಶಕರಾದ ಅಜಯ್ ಸೇಥ್, ನಿರ್ದೇಶಕರಾದ ಎನ್.ಎಂ.ದೋಕೆ, ಡಿ ರಾಧಾಕೃಷ್ಣ ರೆಡ್ಡಿ, ಕಾರ್ಯಕಾರಿ ನಿರ್ದೇಶಕರಾದ ಎ.ಎಸ್. ಶಂಕರ್, ಎಸ್.ಎಸ್. ಹೆಗರೆಡ್ಡಿ, ಎಂ.ಎಸ್. ಚನ್ನಪ್ಪ ಗೌಡರ್, ಬಿ.ಎಸ್. ಪತ್ರಿ, ಚೌವಾಣ್ ಬಿ.ಎಲ್.ವೈ** ಮತ್ತಿತರರು ಉಪಸ್ಥಿತರಿದ್ದರು.

# ದತ್ತು ಸ್ವೀಕಾರ

**ಬೆಂಗಳೂರು, ಆಗಸ್ಟ್ 26, ಕರ್ನಾಟಕ ವಾರ್ತೆ :**

**ಮಾಸ್ಟರ್ ತಕ್ಷ್ (ಹೊನ್ನಸಿರಿ ಗ್ರೂಪ್) ಮೈಸೂರು ಅವರು ಒಂದು ಲಕ್ಷ ರೂಪಾಯಿಗಳನ್ನು ಪಾವತಿಸಿ ಮೈಸೂರು ಮೃಗಾಲಯದ "ಹೈಬ್ರಿಡ್ ಸಿಂಹ" ಪ್ರಾಣಿಯನ್ನು ಒಂದು ವರ್ಷದ ಅವಧಿಗೆ ದತ್ತು ಸ್ವೀಕಾರ ಮಾಡಿರುತ್ತಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

# ಇಲಾಖಾ ಪರೀಕ್ಷೆ

**ಬೆಂಗಳೂರು, ಆಗಸ್ಟ್ 26, ಕರ್ನಾಟಕ ವಾರ್ತೆ :**

**ಕರ್ನಾಟಕ ಲೋಕಸೇವಾ ಆಯೋಗವು 2020ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಯ ವಿಷಯವಾದ ಪಿಡಬ್ಲ್ಯೂಡಿ ಹೈಯರ್ ಭಾಗ–1 ಪತ್ರಿಕೆ 2 (ಸಂಕೇತ: 30/2) ರ ವಿಷಯದ ಪರೀಕ್ಷೆಯನ್ನು**

**ದಿನಾಂಕ: 02-09-2020 ರಂದು ನಿಗದಿಗೊಳಿಸಲಾಗಿತ್ತು. ಕಾರಣಾಂತರಗಳಿಂದ ಸದರಿ ವಿಷಯದ ಪರೀಕ್ಷಾ ದಿನಾಂಕವನ್ನು ಮುಂದೂಡಲಾಗಿದ್ದು, ಮರುನಿಗದಿಪಡಿಸಿದ ಪರೀಕ್ಷಾ ದಿನಾಂಕ ಮತ್ತು ಸಮಯ ಇಂತಿದೆ.**

**ವಿಷಯ/ಪತ್ರಿಕೆ ಹಾಗೂ ಸಂಕೇತ ಸಂಖ್ಯೆ ಪಿಡಬ್ಲ್ಯೂಡಿ ಹೈಯರ್ ಭಾಗ-1 ಪತ್ರಿಕೆ 2 (ಸಂಕೇತ: 30/2 ) ದಿನಾಂಕ 29-07-2020 ರ ತಿದ್ದುಪಡಿ ಅಧಿಸೂಚನೆಯಲ್ಲಿ ನಿಗದಿಪಡಿಸಿದ್ದ ಪರೀಕ್ಷಾ ದಿನಾಂಕ ಮತ್ತು ಸಮಯ 02-09-2020 ಅಪರಾಹ್ನ 2-00 ಗಂಟೆಯಿಂದ 4-00 ಗಂಟೆಯವರೆಗೆ ಪ್ರಸಕ್ತ ನಿಗದಿಪಡಿಸಿರುವ ಪರೀಕ್ಷಾ ದಿನಾಂಕ ಮತ್ತು ಸಮಯ 05-09-2020 ಪೂರ್ವಾಹ್ನ 10.00 ರಿಂದ 12.00 ಗಂಟೆವರೆಗೆ**

**ಅಭ್ಯರ್ಥಿಗಳಿಗೆ ಈಗಾಗಲೇ ಜಾರಿ ಮಾಡಿರುವ ಪ್ರವೇಶ ಪತ್ರದಲ್ಲಿ ಮುದ್ರಿಸಲಾಗಿರುವ ಪರೀಕ್ಷಾ ಉಪಕೇಂದ್ರಗಳಲ್ಲಿಯೇ ಹಾಜರಾಗಲು ಸೂಚಿಸಿದೆ. ಹೆಚ್ಚಿನ ವಿವರಗಳಿಗಾಗಿ ಆಯೋಗದ ವೆಬ್ ಸೈಟ್ ``http://kpsc.kar.nic.in'' ನ್ನು ನೋಡಬಹುದು.**

## ಕೆ.ಓ.ಎಸ್. ಪರೀಕ್ಷೆ

**ಬೆಂಗಳೂರು, ಆಗಸ್ಟ್ 26, ಕರ್ನಾಟಕ ವಾರ್ತೆ :**

**ಕರ್ನಾಟಕ ಮುಕ್ತ ಶಾಲೆ ಕೆ.ಓ.ಎಸ್. ಪರೀಕ್ಷೆಯ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದ್ದು 21-9-2020 ರಿಂದ 30-9-2020 ರವರೆಗೆ ನಿಗದಿತ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುವುದು ಎಂದು ನಿರ್ದೇಸಕರು (ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಪ್ರಕಟಣೆ ತಿಳಿಸಿದೆ.**

## ಸಂತಾಪ

**ಬೆಂಗಳೂರು, ಆಗಸ್ಟ್ 26, ಕರ್ನಾಟಕ ವಾರ್ತೆ:**

ಡಾ.ಎನ್.ನಾರಾಯಣ ಶೆಟ್ಟಿಯವರು ಉಡುಪಿ ಜಿಲ್ಲೆಯ ನಂದಿಕೂರಿನಲ್ಲಿ ದಿನಾಂಕ:01.02.1934ರಲ್ಲಿ ಜನಿಸಿದರು. ಯಕ್ಷಗಾನ ಛಂದೋಂಬುಧಿ ಸಂಶೋಧನಾ ಗ್ರಂಥಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಡಿಲಿಟ್ ಪದವಿ ನೀಡಿದೆ. ಹಾಡುಗಾರರಾಗಿ, ವೇಷಧಾರಿಯಾಗಿ, ನಿರ್ದೇಶಕರಾಗಿ, ಪ್ರಸಂಗಕರ್ತರಾಗಿ, ಲೇಖಕರಾಗಿ ಯಕ್ಷಗಾನದಲ್ಲಿ ಸೇವೆ ಸಲ್ಲಿಸಿರುತ್ತಾರೆ. ಕನ್ನಡ ಛಂದಃಶಾಸ್ತ್ರ ಅನೇಕ ಬಂಧಗಳ ರಹಸ್ಯಭೇದನ ಮಾಡಿ ಪ್ರಥಮ ದಿಗ್ದರ್ಶಕರು ಎನ್ನುವ ಖ್ಯಾತಿಗೆ ಪಾತ್ರರಾಗಿದ್ದಾರೆ. ಮಂದಾರ, ಒಡ್ಡೋಲಗ, ಯಕ್ಷವಿಂಶತಿ, ಮೊದಲಾದ ಹತ್ತಾರು ಗ್ರಂಥಗಳಲ್ಲಿ ಹಾಗೂ ನಾಡಿನ ಕೆಲವಾರು ಪತ್ರಿಕೆಗಳಲ್ಲಿ ಇವರ ಹಲವು ಲೇಖನಗಳು ಪ್ರಕಟವಾಗಿದೆ. ಇವರು ವಿ-ಚಿತ್ರಾ ತ್ರಿಪದಿ, ಅನರ್ಘ್ಯ, ಛಂದೋರತ್ನಗಳು, ಯಕ್ಷಗಾನ ಛಂದೋಂಬುಧಿ ಮುಂತಾದ

ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಶ್ರೀ ಕಟೀಲು ಕ್ಷೇತ್ರ ಮಹಾತ್ಮ್ಯಂ, ಸೊರ್ಕುದ ಸಿರಿಗಿಂಡೆ, ಬಿರ್ದಿದ ಬೈರೆವರ್, ಬೆಂಗಿದ ಬಾಲೆನಾಗಿ, ರಾಜಮುದ್ರಿಕಾ, ಶ್ರೀಕೃಷ್ಣದೇವರಾಯ, ದೀಕ್ಷಾಕಂಕಣ ಮೊದಲಾದ ಯಕ್ಷಗಾನ ಪ್ರಸಂಗ ಪುಸ್ತಕಗಳನ್ನು ರಚಿಸಿದ್ದಾರೆ. 2012ನೇ ಸಾಲಿನಲ್ಲಿ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ವತಿಯಿಂದ ಪಾರ್ತಿಸುಬ್ಬ ಪ್ರಶಸ್ತಿಯು ದೊರೆತಿದೆ. 2018ನೇ ಸಾಲಿನಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿಯಿಂದ ಪುಸ್ತಕ ಬಹುಮಾನ ಪ್ರಶಸ್ತಿ ದೊರೆತಿದೆ. ನೂರಾರು ಸಂಸ್ಥೆಗಳಿಂದ ಸಂಮಾನ-ಪ್ರಶಸ್ತಿ ಪುರಸ್ಕಾರಗಳು ದೊರೆತಿದೆ. ”ದೀಕ್ಷಾ ಕಂಕಣ” ಎಂಬ ಶೀರ್ಷಿಕೆಯ ಯಕ್ಷಗಾನ ಪ್ರಸಂಗಕ್ಕೆ ಸಂಬಂಧಿಸಿದ ಇವರ ಪುಸ್ತಕವನ್ನು ಅಕಾಡೆಮಿಯಿಂದ ಮುದ್ರಿಸಲಾಗಿದೆ. ಇವರ ನಿಧನದಿಂದ ಯಕ್ಷಗಾನ ಕ್ಷೇತ್ರ ಬಡವಾಗಿದೆ. ಇವರ ಆತ್ಮಕ್ಕೆ ಶಾಂತಿ ಸಿಗಲೆಂದು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರು, ಸದಸ್ಯರು, ಹಾಗೂ ರಿಜಿಸ್ಟ್ರಾರ್ ರವರು ಸಂತಾಪ ಸೂಚಿಸಿರುತ್ತಾರೆ.



**ಡಾ.ಎನ್.ನಾರಾಯಣ ಶೆಟ್ಟಿ**
**ದಿನಾಂಕ:01.02.1934 ರಿಂದ ದಿನಾಂಕ:26.08.2020**

## ಶಿಕ್ಷಕ ಮಿತ್ರ, ಶಿಕ್ಷಣವಾಣಿ ಲೋಕಾರ್ಪಣೆ

**ಬೆಂಗಳೂರು, ಆಗಸ್ಟ್ 26, ಕರ್ನಾಟಕ ವಾರ್ತೆ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಆಶ್ರಯದಲ್ಲಿ ಶಿಕ್ಷಕರ ಅನುಕೂಲಕ್ಕಾಗಿ ಶಿಕ್ಷಕ ಮಿತ್ರ- ಆಪ್‌ನ್ನು ರಚಿಸಲಾಗಿದ್ದು, ದಿನಾಂಕ: 28-08-2020ರ ಶುಕ್ರವಾರ ಬೆಳಗ್ಗೆ 11 ಗಂಟೆಗೆ- ಸಮ್ಮೇಳನ ಸಭಾಂಗಣ- ವಿಧಾನಸೌಧದ ಕೊಠಡಿ ಸಂಖ್ಯೆ-334ರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಲೋಕಾರ್ಪಣೆ ಮಾಡಲಿದ್ದಾರೆ.

ಇದೇ ಸಂದರ್ಭದಲ್ಲಿ ಮಾನ್ಯ ಪ್ರಾಥಮಿಕ & ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರ ಕುರಿತ ವಿಮರ್ಶಾ ಬರಹಗಳ ಸಂಕಲನ –ವಿದ್ಯಾ ವಿನೀತ– ಪುಸ್ತಕ ಮತ್ತು ಮಾನ್ಯ ಶಿಕ್ಷಣ ಸಚಿವರು ಬರೆದ ಅಂಕಣ ಲೇಖನಗಳ ಸಂಗ್ರಹ– ಶಿಕ್ಷಣ ಯಾತ್ರೆ – ಪುಸ್ತಕವನ್ನು ಮಾನ್ಯ ಮುಖ್ಯಮಂತ್ರಿಯವರು ಬಿಡುಗಡೆ ಮಾಡುವರು.

ಹಾಗೆಯೇ ಮಧ್ಯಾಹ್ನ 12 ಗಂಟೆಗೆ ಕೆಂಪೇಗೌಡ ರಸ್ತೆಯ ಶಿಕ್ಷಕರ ಸದನದ ಶಿಕ್ಷಕರ ಕಲ್ಯಾಣ ನಿಧಿ ಸಭಾಂಗಣದಲ್ಲಿ ಶಿಕ್ಷಣ ಇಲಾಖೆಯ ಕುಂದುಕೊರತೆ ನಿವಾರಣೆಗೆ ಸಾರ್ವಜನಿಕರು ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಚಿಸಲಾದ ಸಹಾಯವಾಣಿ–ಶಿಕ್ಷಣ ವಾಣಿ ಕೇಂದ್ರಕ್ಕೆ ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರು ಚಾಲನೆ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ ರಾಮಕೃಷ್ಣಾ ವಿವೇಕಾನಂದ ಆಶ್ರಮದ ಶ್ರೀ ವೀರೇಶಾನಂದ ಸ್ವಾಮೀಜಿ ಹಿತನುಡಿಗಳನ್ನು ಆಡಲಿದ್ದಾರೆ ಎಂದು ಶಿಕ್ಷಣ ಸಚಿವರ ಕಚೇರಿಯ ಪ್ರಕಟಣೆಯಲ್ಲಿ ತಿಳಿಸಿದೆ.

## ಭ್ರಷ್ಟಾಚಾರ ಆರೋಪಿತ 2 ಅಧಿಕಾರಿಗಳ ವಿರುದ್ಧ ದಾಳಿ

## ಇಂದು ರಾಜ್ಯಾದ್ಯಂತ 6 ಸ್ಥಳಗಳಲ್ಲಿ ವಿವಿಧ ಎಸಿಬಿ ತಂಡಗಳಿಂದ ಕಾರ್ಯಾಚರಣೆ

**ಬೆಂಗಳೂರು, ಆಗಸ್ಟ್ 26, ಕರ್ನಾಟಕ ವಾರ್ತೆ:** ದಿನಾಂಕ: 26.08.2020 ರಂದು ರಾಜ್ಯದ **2 ವಿವಿಧ ಸರ್ಕಾರಿ ನೌಕರರು** ತಮ್ಮ ಬಲ್ಲ ಮೂಲಗಳಿಗಿಂತ ಹೆಚ್ಚು ಅಸಮತೋಲನ ಆಸ್ತಿ–ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿ ಗಳಿಕೆ ಪ್ರಕರಣಗಳನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ 6 **ಸ್ಥಳಗಳ ಮೇಲೆ** ಇಂದು ದಾಳಿ ನಡೆಸಿರುತ್ತದೆ. ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡೆಸಲಾದ ಸ್ಥಳಗಳ ಹಾಗೂ ಸರ್ಕಾರಿ ಅಧಿಕಾರಿಗಳ ಮಾಹಿತಿ ಈ ಕೆಳಕಂಡಂತಿರುತ್ತವೆ.

1. **ಶ್ರೀ ಎಂ.ಎಸ್.ನಿರಂಜನ್ ಬಾಬು @ ಎಂ.ಎಸ್.ಎನ್.ಬಾಬು, ಕಾರ್ಯದರ್ಶಿ, ಕೊಳಚೆ ನಿರ್ಮೂಲನಾ ಅಭಿವೃದ್ಧಿ ಮಂಡಳಿ, ಬೆಂಗಳೂರು ಹುದ್ದೆಗೆ ವರ್ಗಾವಣೆ ಆದೇಶದಲ್ಲಿರುವವರು, ಈ ಹಿಂದೆ ಉಪ ಕಾರ್ಯದರ್ಶಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು**
   ಇವರ ತುಮಕೂರು ಜಿಲ್ಲೆ, ಶೆಟ್ಟಿಹಳ್ಳಿ, ಮಾರುತಿನಗರದಲ್ಲಿರುವ ವಾಸದ ಮನೆ, ಬೆಂಗಳೂರು ನಗರದ ಯಶವಂತಪುರ ಗೋಲ್ಡನ್ ಗ್ರಾಂಡ್ ಅಪಾರ್ಟ್‌ಮೆಂಟ್ ಇಲ್ಲಿನ ಸ್ನೇಹಿತನ ಫ್ಲಾಟ್.

2. **ಶ್ರೀ. ಹೆಚ್. ನಾಗರಾಜು, ಅಭಿವೃದ್ಧಿ ಅಧಿಕಾರಿ, ವಲಯ–6, ಮೈಸೂರು ಮಹಾನಗರ ಪಾಲಿಕೆ, ಮೈಸೂರು.**
   ಇವರ ಮೈಸೂರು ನಗರದಲ್ಲಿರುವ ವಾಸದ ಮನೆ ಹಾಗೂ ಇವರ ಸಹೋದರ ವಾಸವಾಗಿರುವ ಮಾಗಡಿ ಪಟ್ಟಣದಲ್ಲಿರುವ ವಾಸದ ಮನೆ, ಇವರ ಭಾಮೈದುನ ವಾಸವಾಗಿರುವ ಮೈಸೂರು ನಗರದಲ್ಲಿನ ವಾಸದ ಮನೆ ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ಮೈಸೂರು ಮಹಾನಗರ ಪಾಲಿಕೆ ಕಛೇರಿ, ಮೈಸೂರು.

ಕರ್ನಾಟಕ ರಾಜ್ಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ವಿವಿಧ ತಂಡಗಳಿಂದ ಮೇಲ್ಕಂಡ ಆರೋಪಿತ ಸರ್ಕಾರಿ ನೌಕರರ ವಿರುದ್ಧ ದಾಳಿ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ-ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಮುಂದುವರೆದಿದೆ.

## ಸಚಿವರ ಪ್ರವಾಸ

**ಬೆಂಗಳೂರು, ಆಗಸ್ಟ್ 26, ಕರ್ನಾಟಕ ವಾರ್ತೆ:**

**ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಅವರು ಆಗಸ್ಟ್ 27 ರಂದು ಹುಬ್ಬಳ್ಳಿಯಿಂದ ಬೆಂಗಳೂರಿಗೆ ಆಗಮಿಸುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**